12. ಸ್ವಂತ ಯಾ ಇನಾಂ ಜಮೀನಿನಿಲ್ಲಿ ಕಡಿಯಲ್ಪಟ್ಟು ವ್ಯಾಪಾರ ಯಾ ಮತ್ತಾವ ಬಗ್ಯಾಗಲಿ ಸಾಗಿಸಲ್ಪಡುವ ತಮಾಂ ಸಾದೆ ಯಾ ಸುಡಲ್ಪಟ್ಟು ಸಾಗಿಸಲ್ಪಡುವಂತಾ ಯಿದ್ದಲಿಗಾಗಿ, ಅಮಲ್ದಾರ್ರಿಂದಲಾಗಲಿ, ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರ್ರಿಂದಾಗಲಿ, ಯಾ ಆ ಬ್ಯೆ ಡಿಸ್ಟ್ರಿಕ್ಟು ಡೆಪ್ಯೂಟಿ ಕಮ್ಮಿಷನರವರಿಂದ ಕ್ರಮವಾಗಿ ಅಧಿಕಾರ ಹೊಂದಿದಂತಾ ಇತರ ಸರ್ಕಾರಿ ಉದ್ಯೋಗಸ್ಥನಿಂದಲಾಗಲಿ ಮಾಫೀ ಲೈ ಸೆನ್ಸನ್ನು ಪಡೆಯತಕ್ಕದ್ದು. ಆ ಮೇರಿಗೆ ಲೈಸೆನ್ಸಿನಿ ಬರುವ ಸಾದೆ ಯಾ ಇದ್ದಲಿಗಾಲಿ ಸದರಿ ವಿಧಿಸೋಣಾದ ತೀರ್ವೆ ಮಾಫ್ ಮಾಡಲ್ಪಡುವದು.

13. ಲೈಸೆನ್ಸ್ ಇಲ್ಲದೆ ಯಿರುವಂತಾ ಸಾದೆ ಯಾ ಯಿದ್ದಲು ಯಾವ ಸ್ಥಳಕ್ಕೆ ಸಾಗಿಸಲ್ಪಡುತ್ತೋ ಆ ಸ್ಥಳಕ್ಕೆ ಕೀರುವಾಗ ಭಂಡಿಗಳ ಸಂಖೆಯಮೇಲೆ ತೀರ್ವೆ ತೆರಲಿಕ್ಕೆ ಗುರಿಯಾಗಿರೆತಕ್ಕದ್ದಲ್ಲದೆ ಅಂತಾ ತೀರ್ವೆಯು, ತಾಲ್ಲೂಕಿನವರಿಂದಲಾಗಲಿ, ಡೆಪ್ಯುಟಿ ಕಮ್ಮಿ ಷನರವರು ಮೊಕರರ್ ಮಾಡುವಂತಾ ಇತರರಿಂದಾಗಲಿ, ವಸೂಲ್ ಮಾಡಲ್ಪಡತಕ್ಕದ್ದು.

ತಾರೀಖು 31ನೇ ಡಿಸಂಬರ್ 1888.

ನಂ. 171.—ಸಾಗರದ ಮುನಸಿಫ್ ಬೀ. ನರಸಿಂಹ್ಯಾಯ್ಯಂಗಾರ್ರವ್ರು ಹಂಗಾಮಿಯಾಗಿ ಫಸ್ಟ್ ಕ್ಲಾಸ್ ಮುನಸಿಫರಾಗಿ ನೊಕರ್ರ್ಯಾಡ ಲ್ಪಟ್ಟು ಶ್ರೀರಂಗಪಟ್ಣಕ್ಕೆ ವರ್ಗ ಮಾಡಲ್ಪಟ್ಟಿರುತ್ತಾರೆ.

ಚಿಕ್ಕಬಳ್ಳಾಪುರದ ಮುನಸಿಫ್ ಸಿ. ಬಿ. ಕೇಪಗಿರಿರಾಯರು ಹಂಗಾಮಿ ತರೀಕು 2ನೇ ಕ್ಲಾಸ್ ಮುನಸಿಫರಾಗಿ ನೊಕರ್ರ್ಯಾಡಲ್ಪಟ್ಟು ಕವನೊಗ್ಗೆಗೆ ವರ್ಗಮಾಡಲ್ಪಟ್ಟಿರುತ್ತಾರೆ.

ಕವನೊಗ್ಗಾ ಮುನಸಿಫ್ ಈ. ಸಿ. ಕಿವಜ್ಞಾನಂಪಿಳ್ಳೈಯವರು ಚಿಕ್ಕಬಳ್ಳಾಪುರಕ್ಕೆ ವರ್ಗಮಾಡಲ್ಪಟ್ಟಿರುತ್ತಾರೆ.

ಬಿ. ಎಸ್. ಕೃಷ್ಣಸ್ವಾಮಯ್ಯಂಗಾರ್ ಬಿ. ಎ, ಬಿ. ಯಲ್. ಯವರು ಹಂಗಾಮಿ 3ನೇ ಕ್ಲಾಸ್ ಮುನಸಿಫರಾಗಿ ನೊಕರರ್ಯಾಡಲ್ಪ ಟ್ಟು, ಸಾಗರಕ್ಕೆ ವರ್ಗ ಮಾಡಲ್ಪಟ್ಟಿರುತ್ತಾರೆ.

ತಾರೀಖು 8ನೇ ಜನವರಿ 1889.

ನಂ. 172.—ಮೈಸೂರು ಡಿಸ್ಟ್ರಿಕ್ಟು ಅಸಿಸ್ಟೆಂಟ್ ಕಮಿಷನರ್ ಮೆಸ್ರಿ ಜೆ. ಡಬ್ಲಿಯು. ನೈಟಿಯವರು, 1888ನೇ ಇಸವಿ ನವಂ ಬರ್ 10ರ ಲಾಗಾಯತು 14ರ ವರಿಗೆ ಐದು ದಿವಸಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತಾರೆ.

ತಾರೀಖು 21ನೇ ಡಿಸಂಬರ್ 1888.

ಕಾರ್ಯಾರ್ಥ ದಿವಾನರವರನ್ನು ಭೇಟಿ ಮಾಡುವದಕ್ಕೆ ಅವೇಕ್ಷಿಸುವ ದೊಡ್ಡ ಮನುಷ್ಯರು ಶುಕ್ರವಾರಗಳಲ್ಲಿ ಮಧ್ಯಾನ್ಹಾತ್ಪರ 2 ಘಂಟೆಗೆ ಕಛೇರಿಗೆ ಬರತಕ್ಕದ್ದು. ಈ ಬಗ್ಯಾಗಿ ಹಿಂಮಿನ ದಿನ ಚೀಫ್ ಸೆಕ್ರಿಟರಿಯವರಿಗೆ ತಮ್ಮ ಕಾರ್ಡ್‌ಗಳನ್ನು ಕಳುಹಿಸತಕ್ಕದ್ದು.

2. ಬೆಂಗಳೂರು ಆಫಿನಲ್ಲಿ ಯಿಡಲ್ಪಟ್ಟಿರುವ ಆರ್ಜೀಪೆಟ್ಟಿಗೆಯು ದಿನವಹಿ ಚೀಫ್ ಸೆಕ್ರಿಟರಿಯವರಿಂದ, ಆವರು ಬೆಂಗಳೂರಲ್ಲಿ ಯಿಲ್ಲದ ಕಾಲದಲ್ಲಿ ಅಂಡರ್ ಸೆಕ್ರಿಟರಿಯವರಿಂದಲೂ ಮಧ್ಯಾನ್ಹ 12 ಘಂಟೆಗೆ ತೆಗಿಯಲ್ಪಟ್ಟು ಲದರಲ್ಲಿನ ಆರ್ಜೀಗಳು ತೆಗೆದುಕೊಳ್ಳಲ್ಪಡು ವದು;

3. ಆರ್ಜೀದಾರರುಗಳು ಶುಕ್ರವಾರ ದಿವಸ ಮಧ್ಯಾನ್ಹಾತ್ಪರ 3 ಘಂಟೆಗೆ ಕಛೇರಿಯಲ್ಲಿ ಕೇಳಲ್ಪಡುವರು.

ಬಮೋಜೇಬ್ ಮುಕ್ತಂ.
ಆರ್. ವಿಜಯರಾಘವ್ರಾವ್,
ಚೀಫ್ ಸೆಕ್ರಿಟರಿ.

ದಿವಾನರವರು, ಆವರ ಭೇಟಿಮಾಡಲಿಚ್ಛೈಯುಳ್ಳ ದೊಡ್ಡ ಮನುಷ್ಯರುಗಳನ್ನು ಪ್ರತಿ ಶನಿವಾರ ದಿವಸ ಮಧ್ಯಾನ್ಹ 12 ಘಂಟೆ ಲಾಗಾಯತು 2 ಘಂಟೆ ವರಿಯಂತ ತಮ್ಮ ವಾಸಸ್ಥಾನದಲ್ಲಿ ಬರಮಾಡಿಕೊಳ್ಳುವರು.

ನೇಟಿವ್ ದೊಡ್ಡ ಮನುಷ್ಯರುಗಳು ಅವರಿಗೆ ಯಿಷ್ಟವಿರುವ ಪಕ್ಷಕ್ಕೆ ಅದೇ ದಿವಸ ಮಧ್ಯಾನ್ಹಾತ್ಪರ 3 ಘಂಟೆಗೆ ಬರಬಹುದು.

ಹುಕ್ಕುಂ ಬಮೋಜೇಬ್,
ಕೆ. ದೊರಸಾಮಿಅಯ್ಯರ್,
ಪ್ರೈವೇಟ್ ಸಕ್ರಿಟರಿ.

ವಿದ್ಯಾಭ್ಯಾಸದ ಇಲಾಖೆ.

1888ನೇ ಇಸವಿ ಡಿಸಂಬರ್ ತಾರೀಖು 29.

ಮೈಸೂರು ದೇಶೀಪರೀಕ್ಷೆ.

ಸ್ 1889ನೇ ಇಸವಿ ಫೆಬ್ರವರಿ ತಿಂಗಳಲ್ಲಿ ನಡೆಯುವ ಮೈಸೂರು ದೇಶೀ ವಿದ್ಯಾರ್ಥಿಗಳ ಪರೀಕ್ಷೆಯಲ್ಲಿ ಮೇಲ್ತೋಟೆ ಗೌ ಕಾ ಸ್ಕೂಲ್ ವಿದ್ಯಾರ್ಥಿಗಳ ವೈಕಿ ಅಧಿಕವಾದ ನಂಬರುಗಳನ್ನ ಪಡೆದು ತೇರ್ಗಡೆ ಹೊಂದುವಂಥಾವನಿಗೆ, ಚನ್ನರಾಯಪಟ್ಟಿನ ಅಂಜೆ ನುನ್ಸದ್ದಿ ಮು॥ ರಾ॥ ಕೃಷ್ಣಯ್ಯನವರಿಂದ 6 ರೂಪಾಯಿ ಬೆಲೆಯುಳ್ಳ ಹಿಂದು ದೈವ್ಯ ಬಟ್ಟಲು ಬಹುಮಾನವಾಗಿ ಕೊಡಲ್ಪಡುವದು.

ಎಲ್. ರೈಸ್,
ಎಡ್ಯುಕೇಷನ್ ಸಕ್ರಿಟರಿ